ಶ್ರಿ ಕೆ.ಆರ್. ರಮೇಶ್ ಕುಮಾರ್ : ನನ್ನದನ್ನು ಅವರದ್ದರ ಜೊತೆ club ಮಾಡಬೇಡಿ. ಅವರು ordinary people.

ಐ) **ವಿಷಯ :ಮಂಗಳೂರಿನ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಹಾಗೂ ಅವರ ಶ್ರೀಮತಿಯವರನ್ನು ಬಂದಿಸಿರುವ ಬಗ್ಗೆ : –**

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಮಾರ್ಚ್ ೩ನೇ ತಾರೀಖು ಮಂಗಳೂರಿನಲ್ಲಿ ಕರಾವಳಿ ಅಲೆ ಪತ್ರಿಕೆಯ ಸಂಪಾದಕರನ್ನು ಮತ್ತು ಅವರ ಶ್ರೀಮತಿಯವರನ್ನು ರಜೆ ಇರುವ ಮಾರನೇ ದಿವಸ ಪೊಲೀಸ್ ನವರು ಬಂಧಿಸಿ ಜೈಲಿಗೆ ಹೋಗುವ ರೀತಿ ಮಾಡಿದರು. ಅವರು ಅಪರಾಧ ಮಾಡಿದ್ದರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್.ಪಿ ಇಬ್ಬರು ಸೇರಿ ಉದ್ದೆಶಪೂರ್ವಕವಾಗಿ ಆ ಪತ್ರಿಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಕಾನೂನಿನ ಪ್ರಕಾರ ತನಿಖೆ ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಅಲ್ಲಿನ ಪೊಲೀಸ್ ನವರು, ಮುಖ್ಯವಾಗಿ ಅಲ್ಲಿನ ಸಬ್ ಇನ್ಸ್ ಪೆಕ್ಟರ್ ಮತ್ತು ಎಸ್.ಪಿ. ಇಬ್ಬರು ಸೇರಿ ಉದ್ದೇಶಪೂರ್ವಕವಾಗಿ ಆ ಪತ್ರಕಾ ಸಂಪಾದಕರಿಗೆ ಮಾನಸಿಕ ಹಿಂಸೆ ಕೊಡತಕ್ಕ ರೀತಿಯಲ್ಲೇನು ವರ್ತನೆ ಮಾಡಿದ್ದಾರೆ ಅದರ ಬಗ್ಗೆ ನನ್ನ ತೀವ್ರ ರೀತಿಯ ಆಕ್ಷೇಪವಿದೆ. ಅವರು ಏನಾದರೂ ಕಾನೂನುಬಾಹಿರವಾದ ಕೆಲಸ ಮಾಡಿದ್ದರೆ ಕ್ರಮ ತೆಗೆದುಕೊಳ್ಳಲು ನಮ್ಮ ಅಭ್ಯಂತರವಿಲ್ಲ. ಅವರು ಏನೋ ಜೈನಮುನಿಗಲ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆಂದು ಕೇಸನ್ನು register ಮಾಡಿ ಅವರಿಗೆ F.I.R., warrant ಏನೂ ಕೊಟ್ಟಿಲ್ಲ, ಏಕಾಏಕಿ ರಾತ್ರಿ ಮನೆಯಿಂದ ಅವರನ್ನೂ ಅವರ ಶ್ರೀಮತಿಯವರನ್ನೂ ಹಿಡಿದುಕೊಂಡು ಪೊಲೀಸ್ station ಗೆ ಬಂದು arrest ಮಾಡಿ ರಾತ್ರೋರಾತ್ರೆ Magistrate ಮುಂದೆ produce ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಈ

ದೇಶದಲ್ಲಿ ಅಪರಾಧ ಮಾಡಿದವರು, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಲು ಕಾನೂನಿದೆ ಅದಕ್ಕೆ ಅದರದ್ದೇ ಆದಂಥ ನಿಯಮಗಳಿವೆ. ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ arrest warrant ಇಲ್ಲದೆಯೇ, ಮಹಿಳೆಯರನ್ನು arrest ಮಾಡಲು Supreme Court ಕೆಲವು guidelines ನ್ನು ಕೊಟ್ಟಿದೆ. ಸಂಜೆಯಾದ ಮೇಲೆ ಮಹಿಳೆಯರನ್ನು arrest ಮಾಡಬಾರದೆಂದು Supreme Court ತೀರ್ಪಿದೆ. ನಾಗರೀಕರಾದ ಎಲ್ಲಾ ನಿಯಮಗಳನ್ನು ಉಲ್ಲಂಘನೆ arrest ಮಾಡಿ ಮಾಡಿ ರಜೆ ಇದೆಯೆಂದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ೫ ದಿವಸ ಜೈಲಿನಲ್ಲಿರಬೇಕು ಎಂಬ ಕಾರಣಕ್ಕಾಗಿ ಆ ರೀತಿ ಮಾಡಿದ್ದಾರೆ. ಅಲ್ಲಿಂದ ಶಿವಮೊಗ್ಗ ಪೊಲೀಸ್ ನವರು ಅವರನ್ನು arrest ಮಾಡಿ ಕರೆದುಕೊಂಡು ಹೋಗಿದ್ದಾರೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪತ್ರಿಕೆಯಲ್ಲಿ ಬರೆದಿರತಕ್ಕದೆಲ್ಲಾ ಸತ್ಯವೆಂದು ನಾವೇನು ಒಪ್ಪಬೇಕಾಗಿಲ್ಲ. ಪತ್ರಿಕೆಯಲ್ಲಿ ಬಂದಿರುವುದೆಲ್ಲಾ ಸತ್ಯವೆಂದು ಅದರ ಆದಾರ ಮೇಲೆ ಚರ್ಚೆ ಮಾಡಬಾರದೆಂದು ನಾವೇ ಹಲವಾರು ಸಲ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಆ ರೀತಿ ಏನಾದರು ಇದ್ದರೆ ಅವರ ಮೇಲೆ defamation case ಹಾಕಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತು. Criminal offence ನಲ್ಲಿ arrest ಮಾಡಿ ಜೈಲಿಗೆ ಕಳುಹಿಸಿ ಅವರಿಗೆ ಇವತ್ತು ಮಾನಸಿಕವಾಗಿ ಹಿಂಸೆಯನ್ನು ಕೊಟ್ಟಿದ್ದಾರೆ. ವಾಸ್ತವಿಕವಾಗಿ ಅವರು ಅದರ Editors ಅಲ್ಲ. ಅವರ ಮೇಲೆ ಕೇಸನ್ನು ಹಾಕಿದ್ದಾರೆ. ಅದರ ಬಗ್ಗೆ Press Council ನಲ್ಲಿ ಕೂಡ ಅವರು complaint ಮಾಡಿದ್ದಾರೆ. Press council ನವರು ಅದರ ಬಗ್ಗೆ ತೀವ್ರವಾಗಿ ಖಂಡಿಸಿ ಇದು ಪೊಲೀಸ್ ನವರ ದುಷ್ಕೃತ್ಯ, highhandedness ಮಾಡಿದ್ದಾರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದ್ದಾರೆ. ನಾನು ಕೂಡ ನಮ್ಮ ಮೂಲಕ ಸರ್ಕಾರವನ್ನು ಕೇಳತಕ್ಕದ್ದು, ಆ ರೀತಿ ಕಾನೂನು ಬಾಹಿರ ಕೆಲಸವಾಗಿದ್ದರೆ ಪತ್ರಿಕೆಯಲ್ಲಿ ಆ ರೀತಿ ಏನಾದರೂ ಅವಹೇಳನಕಾರಿಯಾಧ, ಬೇರೆ ರೀತಿಯಾದ ಬರವಣಿಗೆಗಳು ಬಂದರೆ defamation case

ಹಾಕುತ್ತಾರೆ. ಅದರಲ್ಲಿ criminal defamation case ಅಥವಾ civil defamation case ಹಾಕಬಹುದು. ಯಾರಿಗಾದರೂ ಆ ರೀತಿ ಬರೆದಿದ್ದರೆ case ಹಾಕಲಿ. ಆದರೆ, ಪತ್ರಿಕಾ Journalist ಗಳನ್ನು ಪತ್ರಿಕಾ ಸಂಪಾದಕರನ್ನು, ಪತ್ರಕರ್ತರನ್ನು ಈ ರೀತಿಯಾಗಿ ಪೊಲೀಸ್ ನವರು ಅಮಾನವೀಯವಾಗಿ ನಡೆಸಿ ಅವರ ಮೇಲೆ ಹಲ್ಲೆ ಮಾಡತಕ್ಕ ಸ್ಥಿತಿಗೆ ಹೋದರೆ ನಾಳೆ ಪತ್ರಿಕಾ ಸ್ವಾತಂತ್ರ್ಯದ ಪರಿಸ್ಥಿತಿಯೇನಾಗುತ್ತದೆಂದು ನಾವೆಲ್ಲಾ ಆಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಕೇಳುವುದು, ಯಾವ ಪೊಲೀಸ್ ಅಧಿಕಾರಿ ಈ ರೀತಿ ಅತಿರೇಕ ಮಾಡಿದ್ದಾರೆ, ಅವರನ್ನೇನು ಮಾನಸಿಕವಾಗಿ ಹಿಂಸೆಗೆ ಗುರಿಮಾಡಿದ್ದಾರೆ ಅದರ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೆಕೆಂದು ಸರ್ಕಾರವನ್ನು ಮತ್ತು ಗೃಹ ಸಚಿವರಾದ ಮಾನ್ಯ ಪ್ರಕಾಶ್‌ರವರನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಪ್ರಕಾಶ್ ರವರಿಗೆ ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಇರುತ್ತದೆಂದು ನನಗನ್ನಿಸುತ್ತದೆ. ನನ್ನ ಹತ್ತಿರವೂ ಇನ್ನೂ ಮಾಹಿತಿ ಇದೆ. ಆದೆ, ಶೂನ್ಯ ವೇಳೆಯಲ್ಲಿ ಅದರ ಬಗ್ಗೆ ದೀರ್ಘವಾಗಿ ಹೇಳುವುದು ಸರಿಯಲ್ಲವೆಂದು ನಾನು ಅದನ್ನು ಹೇಳುತ್ತಿಲ್ಲ. ಆದ್ದರಿಂದ ಅಲ್ಲಿ ಸಂಬಂಧಪಟ್ಟ ಸಬ್‌ಇನ್ಸ್ ಪೆಕ್ಟರ್ ಹಾಗೂ ಎಸ್.ಪಿ. ಪೊಲೀಸ್ ಅಧಿಕಾರಗಳಾರಿದ್ದಾರೆ. ಅವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂು. ಹಿಂದೆ ಕೂಡ ಮಂಗಳೂರಿನಲ್ಲಿ ಗಲಭೇಯಾದ ಸಂದರ್ಭದಲ್ಲಿ ಅಲ್ಲಿರುವ ಎಸ್.ಪಿ.ಯವರ ಮೆಲೆ ಆಪಾದನೆ ಬಂದಿತ್ತು. ಅದೂ ಮಾನ್ಯ ಪ್ರಕಾಶ್ ರವರ ಗಮನದಲ್ಲಿದೆ. ಆದ್ದರಿಂದ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾರ್ಶ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯ ಈ ಪ್ರಸ್ತಾಪ ಮಾನ್ಯ ಮುಖ್ಯಮಂತ್ರಿಯವರ ಹೆಸರಿನಲ್ಲಿ ಇದ್ದದರಿಂದ ಅದು ಈಗ ನನ್ನ ಗಮನಕ್ಕೆ ಬಂದಿದೆ. ಇದು ಮೊದಲೇ ನನ್ನ ಗಮನಕ್ಕೆ ಬಂದಿದ್ದರೆ ಎಲ್ಲಾ ನಿಖರವಾದ ಮಾಹಿತಿಗಳ ಜೊತೆಗೆ

ಒಂಉದ ಹೇಳಿಕೆಯನ್ನೇ ಪ್ರಸ್ತಾಪ ಮಾಡುತ್ತಿದ್ದೆ. ಆದರೆ, ನನಗೆ ಇರತಕ್ಕ ಮಾಹಿತಿಯ ಆದಾರದ ಮೇಲೆ ಈ ಕರಾವಳಿ ಅಲೆ ಪತ್ರಿಕೆ ..

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಸೋಮವಾರ ಉತ್ತರ ಕೊಡಿ ಪರವಾಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ ಲಿಖಿತ ಹೇಳಿಕೆಯನ್ನು ಸೋಮವಾರ ಕೊಡುತ್ತೇನೆ.

(ಖ) **ವಿಷಯ : ಉಡುಪಿ ಮುನಿಸಿಪಾಲಿಟಿಗೆ ಸುವರ್ಣಬಜೆ ಎಂಬ ಜಾಗದಲ್ಲಿ ಕಟ್ಟಿರುವ ಅಣೆಕಟ್ಟಿನಿಂದ ನೀರನ್ನು ತರಲು ಅನುಮತಿ ನೀಡುವ ಬಗ್ಗೆ:**

ಶ್ರೀ ಕೆ.ಜಯಪ್ರಕಾ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಸುವರ್ಣಬಜೆ ಎಂಬ ಜಾಗದಲ್ಲಿ ಉಡುಪಿ ಮುನಿಸಿಪಾಲಿಟಿಗೆ ನೀರನ್ನು ತರಲು ಅಣೆಕಟ್ಟಿಯನ್ನು ಕಟ್ಟಿದ್ದಾರೆ. ಆ ಭಾಗದ ರೈತರು ಮೊದಲಿನಿಂದಲೂ ಅಲ್ಲಿ permission ತೆಗೆದುಕೊಂಡು motor ಇಟ್ಟು ನೀರುನ್ನು ತೆಗೆದುಕೊಳ್ಳುತ್ತಿದ್ದರು. ಈಗ Municipal Administration Minister ಇಲ್ಲ. ಆದ್ದರಿಂದ ಮಾನ್ಯ ಪ್ರಕಾಶ್ ರವರು ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಕೊಟ್ಟಿರಾಯಿತು. ಆ ಅಣೆಕಟ್ಟೆಯಿಂದ ರೈತರು ನೀರನ್ನು ತೆಗೆಯುತ್ತಿದ್ದಾಖುಎ. ಆದರೆ ಈಗ ಜಿಲ್ಲಾ ಆಡಳಿತ ಡಿ.ಸಿ.ಯವರೇ ಈಗ Municipal administrator. ಅವರು ರೈತರು ನೀರನ್ನು ತೆಗೆಯಬಾರದೆಂದು ಕಟ್ ಔಟ್ ನ್ನೆ ತೆಗೆದುಕೊಂಡು ಹೋಗಿದ್ದಾರೆ. ಅನಂತರ ೧೦ ದಿವಸಕ್ಕೊಂದು ಸಲ ನೀರನ್ನು ತೆಗೆಯಬೇಕೆಂದು ಮಾಡಿದ್ದರು. ಆ ರೈತ ಏನಾಗಬೇಕು? ತೋಟಕ್ಕೆ ನೀರನ್ನು ಬಿಡಲಾಗುವುದಿಲ್ಲ. ಉಡುಪಿ ಮುನಿಸಿಪಾಲಿಟಿ ಏರಿಯಾಕ್ಕೆ ನೀರನ್ನು ಕೊಡಬಾರದೆಂದಲ್ಲ. ಆ ಭಾಗದ ರೈತರಿಗೆ ವಾರಕ್ಕೆ ಒಂದೆರಡು ಬಾರಿಯಾದರೂ ನೀರನ್ನು ತೆಗೆಯಲು ಅವಕಾಶ ಮಾಡಿಕೊಡಬೇಕು.